ಮಲ್ಲಿಗೆ ನಾಡಿನಲ್ಲಿ ಶಿಕ್ಷಣದ ಪರಿಮಳ

ಸಾರ್ವಜನಿಕ ಶಿಕ್ಷಣ ಇಲಾಖೆ



**ಸರಕಾರಿ ಪ್ರೌಢಶಾಲೆ ಬೂದನೂರು**



ತಾ॥ ಹೂವಿನ ಹಡಗಲಿ ಜಿ॥ ಬಳ್ಳಾರಿ

**ಎಸ್.ಎಸ್.ಎಲ್.ಸಿ. ಸಮಾಜ ವಿಜ್ಞಾನ**

# ಪಾಸಿಂಗ್ ಟಾಸ್ಕ್ 2018–19

**(10 ನೇ ತರಗತಿಯ ನಿಧಾನ ಕಲಿಕಾ ವಿಧ್ಯಾರ್ಥಿಗಳು ವಾರ್ಷಿಕ ಲಿಖಿತ ಪರೀಕ್ಷೆಯಲ್ಲಿ ಕನಿಷ್ಠ ಪಾಸಿಂಗ್ ಅಂಕ ಗಳಿಸುವ ಸಾಮರ್ಥ್ಯ ಬೆಳೆಸುವ ವೇಳಾಪಟ್ಟಿ ಆಧಾರಿತ ಅಭ್ಯಾಸ ಕಾರ್ಯ ಯೋಜನೆ)**

=============================

ಒಂದು ಯೋಜನೆ (ಟಾಸ್ಕ್)

8 ವಾರಗಳು (56 ದಿನಗಳು)

ಮೂರು ವೇಳಾಪಟ್ಟಿಗಳು

6 ಅಭ್ಯಾಸ ಪ್ರಶ್ನೆ ಪತ್ರಿಕೆಗಳು

206 ಪ್ರಶ್ನೆಗಳು (ಬಹುನಿರೀಕ್ಷಿತ ಮತ್ತು ಸರಳ)

ಒಂದು ಗುರಿ (ಪಾಸ್)

================================


<u>ಪರಿಕಲ್ಪನೆ ಮತ್ತು ರಚನೆ:</u>

**ಶ್ರೀನಿವಾಸ ಹೆಚ್.ಕೆ.** ಸ.ಶಿ.

ಸರಕಾರಿ ಪ್ರೌಢಶಾಲೆ ಬೂದನೂರು

ತಾ॥ ಹಡಗಲಿ ಜಿ॥ ಬಳ್ಳಾರಿ




## * ಪಾಸಿಂಗ್ ಟಾಸ್ಕ್ ನ ಉದ್ದೇಶ ಮತ್ತು ವೈಶಿಷ್ಟ್ಯಗಳು:

1. ಇದು ಅತಿ ನಿಧಾನ ಕಲಿಕೆ ವಿಧ್ಯಾರ್ಥಿಗಳಿಗೆ ಮಾತ್ರ.
2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಪ್ರತಿ ಪಾಠಕ್ಕೆ ನೀಡಿರುವ ವೇಟೇಜ್ ಮತ್ತು ಪ್ರಕಟಿಸಿರುವ ಮಾದರಿ ಪ್ರಶ್ನೆಪತ್ರಿಕೆಗಳನ್ನು ಆಧರಿಸಿ ತೆಗೆಯಲಾದ ಬಹುನಿರೀಕ್ಷಿತ ಪ್ರಶ್ನೆಗಳನ್ನೊಳಗೊಂಡಿದೆ.
3. ಎಲ್ಲಾ ಪ್ರಶ್ನೆಗಳನ್ನು 6 ಅಭ್ಯಾಸ ಪ್ರಶ್ನೆ ಪತ್ರಿಕೆಗಳಲ್ಲಿ ವಿಂಗಡಿಸಿ ವೇಳಾಪಟ್ಟಿಯಂತೆ ಅವುಗಳ ಅಭ್ಯಾಸ ಮತ್ತು ತರಗತಿಯಲ್ಲಿ ಚರ್ಚೆ.
4. ಪ್ರಶ್ನೆಗಳ ಸಿದ್ಧ ಉತ್ತರಗಳನ್ನು ಪ್ರಿಂಟೆಡ್ ಆಗಿ ನೀಡದೇ ತರಗತಿ ಮತ್ತು ಗುಂಪು ಅಧ್ಯಯನಗಳಲ್ಲಿ ಚರ್ಚಿಸಿ ಬರೆಸುವುದು.
5. ಪ್ರತಿದಿನ ವೇಳಾಪಟ್ಟಿ ಅನುಸಾರ ಮೌಖಿಕ ಪ್ರಶ್ನೆ ಕೇಳುವುದು ಮತ್ತು ವಾರದ ಕೊನೆಯಲ್ಲಿ ಲಿಖಿತ ಮೌಲ್ಯಮಾಪನ.
6. ಬಹುತೇಕ ಸರಳ ಪಾಠಗಳ ಆಯ್ಕೆ ಮತ್ತು ಸರಳ ಉತ್ತರಗಳ ಬರೆಸುವಿಕೆ.

## * ಪಾಸಿಂಗ್ ಟಾಸ್ಕ್ ನ ಕಾರ್ಯಸೂಚಿ:

* ಜನವರಿ 7ನೇ ತಾರೀಖಿನಿಂದ ಆರಂಬಿಸಿ 3 ವೇಳಾಪಟ್ಟಿಗಳಲ್ಲಿ 3 ಬಾರಿ ಅಭ್ಯಾಸ ಪತ್ರಿಕೆಗಳ ಉತ್ತರಗಳ ಅಧ್ಯಯನ.
* ಜನವರಿ 7 ರಿಂದ ಫೆಬ್ರವರಿ 24 ರವರೆಗೆ ದೊರೆಯುವ 7 ವಾರಗಳಲ್ಲಿ 1 ವಾರ ಜಿಲ್ಲಾ ಹಂತದ ಪೂರ್ವ ಸಿದ್ಧತಾ ಪರೀಕ್ಷೆಗೆ ಕಳೆದು ಸಿಗುವ 6 ವಾರಗಳಲ್ಲಿ ಪ್ರತಿ ಒಂದು ವಾರಕ್ಕೆ ಒಂದು ಅಭ್ಯಾಸ ಪ್ರಶ್ನೆ ಪತ್ರಿಕೆ ಅಧ್ಯಯನ.
* ಪ್ರತಿ ವಾರದ ಅಭ್ಯಾಸ ಪತ್ರಿಕೆಯ ಪ್ರಶ್ನೆಗಳನ್ನು ದಿನಗಳಲ್ಲಿ ವಿಂಗಡಿಸಿ ದಿನಕ್ಕೆ 4 ರಿಂದ 8 ಪ್ರಶ್ನೆ ಬರುವಂತೆ (ಅಂಕಗಳು ಆಧರಿಸಿ ಹೊರೆಯಾಗದಂತೆ) ತರಗತಿಯಲ್ಲಿ ಉತ್ತರ ಬರೆಸಿ ಓದಲು ಹೇಳುವುದು.
* ಫೆಬ್ರುವರಿ 25 ರಿಂದ ಮಾರ್ಚ್ 17 ರ ವರೆಗೆ ಸಿಗುವ 3 ವಾರಗಳಲ್ಲಿ ಒಂದು ವಾರ ರಾಜ್ಯ ಮಟ್ಟದ ಪೂರ್ವ ಸಿದ್ಧತಾ ಪರೀಕ್ಷೆಗೆ ಕಳೆದು ಸಿಗುವ 2 ವಾರಗಳಲ್ಲಿ ವಾರಕ್ಕೆ 3 ಅಬ್ಯಾಸ ಪತ್ರಿಕೆಗಳಂತೆ ಪುನರಾವರ್ತನೆ ಅಭ್ಯಾಸ.
* ಮಾರ್ಚ್ 29 ರಂದು ಸಮಾಜ ವಿಜ್ಞಾನ ವಾರ್ಷಿಕ ಪರೀಕ್ಷೆ ಇದ್ದು ದಿನಾಂಕ 27 ರಂದು ನಡೆಯುವ ಇಂಗ್ಲೀಷ್ ಭಾಷಾ ಪರೀಕ್ಷೆ ನಂತರ ಸಿಗುವ ಮದ್ಯಾಹ್ನದ ಅವಧಿ ಮತ್ತು ದಿನಾಂಕ 28 ರಂದು ಸಿಗುವ ಪೂರ್ಣ ದಿನದ ಒಟ್ಟು 12 ತಾಸು ಅಭ್ಯಾಸ, 2 ತಾಸಿಗೆ ಒಂದು ಅಭ್ಯಾಸ ಪತ್ರಿಕೆ ಪುನರಾವರ್ತನೆ.
* ಪ್ರತಿ ವಾರದ ವೀಕೆಂಡ್ ಲಿಖಿತ ಮೌಲ್ಯಮಾಪನ ಮಾಡಿ ಕಲಿಯಲಾರದ ಪ್ರಶ್ನೆಗಳನ್ನು ಮತ್ತೊಮ್ಮೆ ಓದಲು ಹೇಳುವುದು.
* ತರಗತಿಯಲ್ಲಿರುವ ಇಂತಹ ವಿದ್ಯಾರ್ಥಿಗಳಿಗೆ ಸಹಾಯಕರಾಗಿ ಓರ್ವ ಕಲಿಕೆಯಲ್ಲಿ ಮುಂದಿರುವ ವಿದ್ಯಾರ್ಥಿಯನ್ನು ಬಳಸಿಕೊಂಡು ಕನಿಷ್ಠ ದಿನದ ಹತ್ತು ನಿಮಿಷ ಅವನ/ಳ ಸಹಾಯಕ್ಕೆ ತಿಳಿಸಿ ಅವರಲ್ಲಿ ಸೇವಾಗುಣ ಬೆಳೆಸುವುದು.

*** ಕಠಿಣ ಪರಿಶ್ರಮ ಯಶಸ್ಸಿನ ರಹಸ್ಯ ***

| ಜನವರಿ 2019 | | | | | |
|---|---|---|---|---|---|
| ರವಿ | | 6 | 13 | 20 | 27 |
| ಸೋಮ | | 7 | 14 | 21 | 28 |
| ಮಂಗಳ | 1 | 8 | 15 | 22 | 29 |
| ಬುಧ | 2 | 9 | 16 | 23 | 30 |
| ಗುರು | 3 | 10 | 17 | 24 | 31 |
| ಶುಕ್ರ | 4 | 11 | 18 | 25 | |
| ಶನಿ | 5 | 12 | 19 | 26 | |
| ಫೆಬ್ರವರಿ 2019 | | | | | |
| ರವಿ | | 3 | 10 | 17 | 24 |
| ಸೋಮ | | 4 | 11 | 18 | 25 |
| ಮಂಗಳ | | 5 | 12 | 19 | 26 |
| ಬುಧ | | 6 | 13 | 20 | 27 |
| ಗುರು | | 7 | 14 | 21 | 28 |
| ಶುಕ್ರ | 1 | 8 | 15 | 22 | |
| ಶನಿ | 2 | 9 | 16 | 23 | |
| ಮಾರ್ಚ 2019 | | | | | |
| ರವಿ | 31 | 3 | 10 | 17 | 24 |
| ಸೋಮ | | 4 | 11 | 18 | 25 |
| ಮಂಗಳ | | 5 | 12 | 19 | 26 |
| ಬುಧ | | 6 | 13 | 20 | 27 |
| ಗುರು | | 7 | 14 | 21 | 28 |
| ಶುಕ್ರ | 1 | 8 | 15 | 22 | 29 |
| ಶನಿ | 2 | 9 | 16 | 23 | 30 |
| ಎಪ್ರಿಲ್ 2019 | | | | | |
| ರವಿ | | 7 | 14 | 21 | 28 |
| ಸೋಮ | 1 | 8 | 15 | 22 | 29 |
| ಮಂಗಳ | 2 | 9 | 16 | 23 | 30 |
| ಬುಧ | 3 | 10 | 17 | 24 | |
| ಗುರು | 4 | 11 | 18 | 25 | |
| ಶುಕ್ರ | 5 | 12 | 19 | 26 | |
| ಶನಿ | 6 | 13 | 20 | 27 | |

## ವೇಳಾಪಟ್ಟಿ –1

ಜನವರಿ 7, 2019 ರಿಂದ

ಫೇಬ್ರವರಿ 24, 2019

## ವೇಳಾಪಟ್ಟಿ –2

ಮಾರ್ಚ್ 3, ರಿಂದ

ಮಾರ್ಚ್ 17 2019

## ವೇಳಾಪಟ್ಟಿ –3

ಮಾರ್ಚ್ 27 ಮತ್ತು 28, 2019

ಜಿಲ್ಲಾ ಪೂ.ಸಿದ್ಧತಾ ಪರೀಕ್ಷೆ

ರಾಜ್ಯ ಪೂ.ಸಿದ್ಧತಾ ಪರೀಕ್ಷೆ

ವಾರ್ಷಿಕ ಪರೀಕ್ಷೆ

## ಅಭ್ಯಾಸ ಪ್ರಶ್ನೆ ಪತ್ರಿಕೆ –1 (ಜನವರಿ 7 ರಿಂದ 13)

**ಅ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರ ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರ ಬರೆಯಿರಿ.** **1X10=10**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಸ್ಥಾಪಕರು.

   ಎ) ಎ.ಓ.ಹ್ಯೂಮ್. ಬಿ) ಡಬ್ಲ್ಯು.ಸಿ. ಬ್ಯಾನರ್ಜಿ ಸಿ) ಗಾಂದೀಜಿ ಡಿ) ನೆಹರೂ

2. ಮೊದಲನೇ ಆಂಗ್ಲೋ ಮರಾಠಾ ಯುದ್ದದ ಕೊನೆಯಲ್ಲಾದ ಒಪ್ಪಂದ.

   ಎ) ಮೈಸೂರು ಒಪ್ಪಂದ ಬಿ) ಸಾಲ್ಬಾಯ್ ಒಪ್ಪಂದ ಸಿ) ಮಂಗಳೂರು ಒಪ್ಪಂದ ಡಿ) ಪುರಂದರ ಒಪ್ಪಂದ

3. ಸಹಾಯಕ ಸೈನ್ಯ ಪದ್ಧತಿ ಜಾರಿಗೆ ತಂದವರು.

   ಎ) ಕಾರ್ನ್ ವಾಲಿಸ್ ಬಿ) ಡಾಲ್ ಹೌಸಿ ಸಿ) ವಿಲಿಯಂ ಬೆಂಟಿಂಕ್ ಡಿ) ಲಾರ್ಡ್ ವೆಲ್ಲಸ್ಲಿ.

4. ರಷ್ಯಾದಲ್ಲಿ ಕಮ್ಯುನಿಷ್ಠ ಸರ್ಕಾರ ಸ್ಥಾಪಿಸಿದವರು.

   ಎ) ಸ್ಟಾಲಿನ್ ಬಿ) ಗೋರ್ಬಚೇವ್ ಸಿ) ಲೆನಿನ್ ಡಿ) ರೂಸ್ ವೆಲ್ಟ್

5. ವಿಶ್ವಸಂಸ್ಥೆ ಆರಂಭವಾದ ವರ್ಷ.

   ಎ) 1945 ಬಿ) 1947 ಸಿ) 1919 ಡಿ) 1939

6. ವಿಶ್ವಸಂಸ್ಥೆಯ ಮುಖ್ಯ ಕಚೇರಿ ಇರುವ ಸ್ಥಳ.

   ಎ) ವಾಷಿಂಗ್ಟನ್ ಬಿ) ನ್ಯೂಯಾರ್ಕ್ ಸಿ) ಜಿನೇವಾ ಡಿ) ಪ್ಯಾರಿಸ್

7. ಪರಿಸರ ಚಳುವಳಿ ಎಂದರೆ.

   ಎ) ಪರಿಸರದ ಜೀವಜಗತ್ತಿನ ಸಂರಕ್ಷಣೆ ಬಿ) ಪರಿಸರ ಮಾಲಿನ್ಯ ಮಾಡುವುದು

   ಸಿ) ಭ್ರಷ್ಟಾಚಾರ ತಡೆಯುದು ಡಿ) ಮಧ್ಯಪಾನ ನಿಯಂತ್ರಣ.

8. ಇತ್ತೀಚಿನ ದಿನಗಳಲ್ಲಿ ಭಾರತದಿಂದ ಮೈಕಾ(ಅಭ್ರಕ) ರಫ್ತು ಕಡಿಮೆಯಾಗಿದೆ. ಕಾರಣ.

   ಎ) ಕಡಿಮೆ ಉತ್ಪಾದನೆ ಬಿ) ರಫ್ತು ಸುಂಕ ಹೆಚ್ಚಳ ಸಿ) ಜಾಗತೀಕರಣ ಡಿ) ಕೃತಕ ಅಭ್ರಕದ ಉತ್ಪಾದನೆ.

9. ಈ ಕೆಳಗಿನವುಗಳಲ್ಲಿ ನವೀಕರಿಸಬಲ್ಲ ಶಕ್ತಿ ಸಂಪನ್ಮೂಲ.

   ಎ) ಕಲ್ಲಿದ್ದಲು ಬಿ) ಪೆಟ್ರೋಲಿಯಂ ಸಿ) ಅಣು ವಿದ್ಯುತ್ ಡಿ) ಜಲವಿದ್ಯುಚ್ಛಕ್ತಿ

10. WTO (ವಿಶ್ವ ವ್ಯಾಪಾರ ಸಂಘಟನೆ) ಯ ಕೇಂದ್ರ ಕಚೇರಿ ಇರುವುದು.

    ಎ) ಜಿನೇವಾ ಬಿ) ಪ್ಯಾರಿಸ್ ಸಿ) ನ್ಯೂಯಾರ್ಕ್ ಡಿ) ಹೇಗ್

**ಆ. ಈ ಕೆಳಗಿನ ಪ್ರಶನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **1X12=12**

11. ವೆಲ್ಲಸ್ಲಿನ ತನ್ನ ಹುದ್ದೆಗೆ ರಾಜಿನಾಮೆ ನೀಡಿ ಸ್ವದೇಶಕ್ಕೆ ಏಕೆ ಮರಳಿದನು?
12. ಲಾರ್ಡ್ ವೆಲ್ಲಸ್ಲಿ ಕಾಲದಲ್ಲಿ ಬ್ರಿಟೀಷ್ ಆಡಳಿತದ ವಿಸ್ತರಣೆ ಸುಲಭವಾಯಿತು. ಏಕೆ?
13. ಭಾರತದ ವಿದೇಶಾಂಗ ನೀತಿ ರೂಪಿಸಿದವರು ಯಾರು?
14. ಮಹಿಳಾ ಚಳುವಳಿ ಎಂದರೇನು?

15. ಕಾರ್ಮಿಕ ಚಳುವಳಿ ಎಂದರೇನು?

16. ಸಾಂದ್ರ ಬೇಸಾಯ ಎಂದರೇನು?

17. ಆರ್ದ್ರ ಬೇಸಾಯ ಎಂದರೇನು?

18. ಕೈಗಾರಿಕೆ ಎಂದರೇನು?

19. 2011 ರ ಜನಗಣತಿಯಂತೆ ಭಾರತದ ಒಟ್ಟು ಜನಸಂಖ್ಯೆ ಎಷ್ಟು?

20. ಭಾರತದ ಅತ್ಯಂತ ಜನಭರಿತ ರಾಜ್ಯ ಯಾವುದು?

21. ಭಾರತೀಯ ರಿಸರ್ವ್ ಬ್ಯಾಂಕ್ (RBI) ಯಾವಾಗ ಸ್ಥಾಪನೆಯಾಯಿತು?

22. 'ಜಾಗತೀಕರಣ' ಎಂದರೇನು?

**ಇ. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ. 2X6=12**

23. ಮೂರನೇ ಕರ್ನಾಟಿಕ್ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳೇನು?

24. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಕಾರಣಗಳೇನು?

25. ಭಾರತೀಯ ಒಕ್ಕೂಟಕ್ಕೆ ಬಲವಂತವಾಗಿ ಸೇರಿಸಲ್ಪಟ್ಟ ಸಂಸ್ಥಾನಗಳು ಯಾವುವು?

26. ಭಾರತದೊಂದಿಗೆ ರಷ್ಯಾ ಸಂಬಂಧ ಉತ್ತಮವಾಗಿದೆ. ಹೇಗೆ?

27. ಬಾಲಕಾರ್ಮಿಕ ಸಮಸ್ಯೆಗೆ ಕಾರಣಗಳೇನು?

28. ಉತ್ತರದ ಮೈದಾನಗಳು ಹೇಗೆ ರಚನೆಯಾಗಿವೆ?

**ಈ. ಈ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ. 3X3=9**

29. ಶೈಕ್ಷಣಿಕ ಸಮಾನತೆಗಾಗಿ ಸರ್ಕಾರದ ಕ್ರಮಗಳನ್ನು ಬರೆಯಿರಿ.

30. ಅಂಚೆ ಕಛೇರಿಗಳು ಒದಗಿಸುವ ಸೇವೆಗಳು ಯಾವುವು?

31. ಹಣದ ವಿಕಾಸದ ಹಂತಗಳನ್ನು ಬರೆಯಿರಿ.

**ಉ. ಈ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4X1=4**

32. ಮಹಾತ್ಮಾ ಗಾಂಧೀಜಿಯವರ ಆರಂಭದ ಹೋರಾಟಗಳನ್ನು ಬರೆಯಿರಿ.

**33. ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. 1+3=4**

ಎ) $82_{1/2}$ಪೂ.ರೇಖಾಂಶ ಬಿ) ಕೊಲ್ಕತ್ತಾ ಬಂದರು ಸಿ) ಸಿಂಗಭೂಮ್ ಡಿ) ರಾಜೀವ್ ಗಾಂಧಿ ವಿಮಾನ ನಿಲ್ದಾಣ

**34. ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. 1+3=4**

ಎ) ದೆಹಲಿ ಬಿ) ಪಶ್ಚಿಮ ಘಟ್ಟಗಳು ಸಿ) ಕಾಳಹಂಡಿ ಡಿ) ಸೇಲಂ

## ಅಭ್ಯಾಸ ಪ್ರಶ್ನೆ ಪತ್ರಿಕೆ – 2 (ಜನವರಿ 14 ರಿಂದ 20)

**ಅ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರ ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರ ಬರೆಯಿರಿ.** **1X10=10**

1. ಮರಾಠಾ ಪತ್ರಿಕೆಯನ್ನು ಪ್ರಕಟಿಸಿದವರು.

   ಎ) ದಾದಾಬಾಯಿ ನವರೋಜಿ ಬಿ) ಗೋಖಲೆ ಸಿ) ಬಾಲಗಂಗಾಧರ ತಿಲಕ ಡಿ) ಸಿ. ಆರ್. ದಾಸ್

2. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಮೂಲಕ ಸಾಮ್ರಾಜ್ಯ ವಿಸ್ತರಿಸಿದವರು.

   ಎ) ಡಾಲ್ ಹೌಸಿ ಬಿ) ವೆಲ್ಲಸ್ಲಿ ಸಿ) ಬೆಂಟಿಂಕ್ ಡಿ) ಕರ್ಜನ್

3. ಸಹಾಯಕ ಸೈನ್ಯ ಪದ್ಧತಿ ಜಾರಿಗೆ ಬಂದ ವರ್ಷ.

   ಎ) 1978 ಬಿ) 1798 ಸಿ) 1478 ಡಿ) 1453

4. ಸೋವಿಯತ್ ರಷ್ಯಾದಲ್ಲಿ ಸಮಾಜವಾದ ಕುಸಿಯಲು ಕಾರಣ.

   ಎ) ಪ್ರಜಾಪ್ರಭುತ್ವ ಕ್ರಾಂತಿ ಬಿ) ರಾಜಪ್ರಭುತ್ವ ನಾಶ ಸಿ) ಗೋರ್ಬಚೇವ್ ನ ಸುಧಾರಣೆಗಳು ಡಿ)ಮಹಾಯುದ್ಧಗಳು

5. ವಿಶ್ವ ಸಂಸ್ಥೆಯ ಸಂಸತ್ ನಂತೆ ಕಾರ್ಯ ನಿರ್ವಹಿಸುವ ಅಂಗ.

   ಎ) ಭದ್ರತಾ ಸಮಿತಿ ಬಿ) ಸಾಮಾನ್ಯ ಸಭೆ ಸಿ) ಸಚಿವಾಲಯ ಡಿ) ಆರ್ಥಿಕ ಮತ್ತು ಸಾಮಾಜಿಕ ಸಮಿತಿ

6. ಈ ಕೆಳಗಿನ ಯಾವ ದೇಶ ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರವಲ್ಲ.

   ಎ) ರಷ್ಯಾ ಬಿ) ಅಮೆರಿಕಾ ಸಿ) ಚೀನಾ ಡಿ) ಜರ್ಮನಿ.

7. ನರ್ಮದಾ ಆಂದೋಲನದ ನೇತೃತ್ವ ವಹಿಸಿದವರು

   ಎ) ಕುಸುಮ ಸೊರಬ ಬಿ) ವಿನೋಬಾ ಭಾವೆ ಸಿ) ಪಾಂಡುರಂಗ ಹೆಗಡೆ ಡಿ) ಮೇಧಾ ಪಾಟ್ಕರ್

8. ಅಲ್ಯುಮಿನಿಯಂ ನ ಪ್ರಮುಖ ಕಚ್ಚಾ ಪದಾರ್ಥ.

   ಎ) ಬಾಕ್ಸೈಟ್ ಬಿ) ಅಭ್ರಕ ಸಿ) ಮ್ಯಾಂಗನೀಸ್ ಡಿ) ತಾಮ್ರ

9. ಭಾರತ ಪೆಟ್ರೋಲಿಯಂ ಆಮದು ಮಾಡಿಕೊಳ್ಳುತ್ತದೆ ಕಾರಣ.

   ಎ) ವಿದೇಶದ ಪೆಟ್ರೋಲಿಯಂ ಉತ್ತಮ ದರ್ಜೆಯದ್ದು ಬಿ) ಭಾರತದಲ್ಲಿ ಪೆಟ್ರೋಲಿಯಂ ಉತ್ಪಾದನೆ ಕಡಿಮೆ

   ಸಿ) ಆಮದು ಸುಂಕ ಕಡಿಮೆ ಇರುವುದು ಡಿ) ಜಾಗತೀಕರಣದಿಂದಾಗಿ

10. ಜಾಗತೀಕರಣಕ್ಕೆ ಸರಿಹೊಂದುವ ವಾಕ್ಯ.

    ಎ) ಸರಕು ಸೇವೆಗಳ ಹೆಚ್ಚುತ್ತಿರುವ ಗಡಿಯಾಚೆಗಿನ ಚಲನೆ ಬಿ) ಬಂಡವಾಳ ತಾಂತ್ರಿಕತೆಯ ಅಂತರಾಷ್ಟ್ರೀಯ ಹರಿವು

    ಸಿ) ವಿಶ್ವವೇ ಒಂದು ಮಾರುಕಟ್ಟೆಯಾಗಿದೆ. ಡಿ) ಮೇಲಿನ ಎಲ್ಲವೂ

**ಆ. ಈ ಕೆಳಗಿನ ಪ್ರಶನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **1X12=12**

11. ಪೇಶ್ವೆ ಎರಡನೇ ಬಾಜೀರಾವ್ ಸಹಾಯಕ ಸೈನ್ಯ ಪದ್ಧತಿ ಒಪ್ಪಿಕೊಳ್ಳಲು ಕಾರಣವೇನು?
12. ಸಿಖ್ಖರನ್ನು ಸಂಘಟಿಸಿದ ದೊರೆ ಯಾರು?
13. ಭಾರತ ಗುಣಾತ್ಮಕ ಮತ್ತು ಗಾತ್ರದ ಪರಿಮಿತಿಯಲ್ಲಿ ನಿಶ್ಯಸ್ತ್ರೀಕರಣ ಪ್ರತಿಪಾದಿಸುತ್ತದೆ. ಏಕೆ?
14. ಕಾರ್ಮಿಕ ಸಂಘಟನೆಗಳಿಗೆ ಶಾಸನಾತ್ಮಕ ಮನ್ನಣೆ ನೀಡಿದ ಕಾಯ್ದೆ ಯಾವುದು?

15. ಸಾಗುವಳಿಗೆ ಬಳಕೆಯಾಗದ ಭೂಮಿಯನ್ನು ಏನೆನ್ನುವರು?

16. ಭೂಬಳಕೆ ಎಂದರೇನು?

17. ಜ್ಞಾನಾಧಾರಿತ ಕೈಗಾರಿಕೆಗಳು ತೀವ್ರಗತಿಯಲ್ಲಿ ಬೆಳೆಯುತ್ತಿರಲು ಕಾರಣವೇನು?

18. ಹೆಚ್ಚು ಜನಸಾಂದ್ರತೆಯುಳ್ಳ ಭಾರತದ ರಾಜ್ಯ ಯಾವುದು?

19. ಅತಿ ಕಡಿಮೆ ಜನಸಂಖ್ಯೆಯ ಕೇಂದ್ರಾಡಳಿತ ಪ್ರದೇಶ ಯಾವುದು?

20. ಭಾರತೀಯ ರಿಸರ್ವ ಬ್ಯಾಂಕ್ (RBI) ಯಾವಾಗ ರಾಷ್ಟ್ರೀಕರಣಗೊಂಡಿತು?

21. ಜಾಗತೀಕರಣದ ಒಂದು ಸಕಾರಾತ್ಮಕ ಪರಿಣಾಮ ಬರೆಯಿರಿ.

22. ಜಾಗತೀಕರಣದ ಒಂದು ನಕಾರಾತ್ಮಕ ಪರಿಣಾಮ ಬರೆಯಿರಿ.

**ಇ. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ. 2X6=12**

23. ಭಾರತದ ಜಲಮಾರ್ಗ ಶೋಧಕ್ಕೆ ಕಾರಣವಾದ ವೈಜ್ಞಾನಿಕ ಶೋಧಗಳು ಯಾವುವು?

24. ಬ್ರಿಟಿಷರ ಆರ್ಥಿಕ ನೀತಿ 1857 ರ ದಂಗೆಗೆ ಹೇಗೆ ಕಾರಣವಾಯಿತು?

25. ಹೈದರಾಬಾದನ್ನು ಭಾರತದ ಒಕ್ಕೂಟಕ್ಕೆ ಹೇಗೆ ಸೇರಿಸಲಾಯಿತು?

26. ಬಾಲ್ಯ ವಿವಾಹದ ಪರಿಣಾಮಗಳೇನು?

27. ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗೆ ವ್ಯತ್ಯಾಸ ಬರೆಯಿರಿ.

28 ಇತ್ತೀಚೆಗೆ ಚೀನಾದೊಂದಿಗಿನ ಬಾಂದವ್ಯ ಹದಗೆಡಲು ಕಾರಣವೇನು?

**ಈ. ಈ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ. 3X3=9**

29. ಅಸ್ಪೃಶ್ಯತೆ ನಿವಾರಣೆಗೆ ಇರುವ ಸಂವಿದಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳೇನು?.

30. ಬ್ಯಾಂಕ್ ಖಾತೆ ತೆರೆಯುವ ವಿಧಾನ ಬರೆಯಿರಿ.

31. ಭಾರತೀಯ ರಿಸರ್ವ ಬ್ಯಾಂಕ್ (RBI) ಬಳಸುವ ಸಾಲ ನಿಯಂತ್ರಣ ಕ್ರಮಗಳನ್ನು ಬರೆಯಿರಿ

**ಉ. ಈ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4X2=8**

32. ಅಸಹಕಾರ ಚಳುವಳಿಯ ಘಟನೆಗಳನ್ನು ಬರೆಯಿರಿ.

33. ಕ್ವಿಟ್ ಇಂಡಿಯಾ ಚಳುವಳಿ ಕುರಿತು ವಿವರಿಸಿ.

34. **ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. 1+3=4**

ಎ) ಕರ್ಕಾಟಕ ಸಂಕ್ರಾಂತಿ ವೃತ್ತ ಬಿ) ಮಲಬಾರ್ ತೀರ ಸಿ) ಸುಂದರ್ ಘರ್ ಡಿ) ನೈವೇಲಿ

35. **ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. 1+3=4**

ಎ) ಹಿರಾಕುಡ್ ಯೋಜನೆ ಬಿ) ನವಶೇವಾ ಬಂದರು ಸಿ) ಕಿಯ್ಯೋಂಜಾರ್ ಡಿ) ಅಮೃತಸರ

## ಅಭ್ಯಾಸ ಪ್ರಶ್ನೆ ಪತ್ರಿಕೆ – 3 (ಜನವರಿ 21 ರಿಂದ 27)

**ಅ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರ ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರ ಬರೆಯಿರಿ.** **1X10=10**

1. 1905 ರಲ್ಲಿ ಬಂಗಾಳದ ವಿಭಜನೆ ರೂಪಿಸಿದ ವೈಸ್ ರಾಯ್.

   ಎ) ಲಾರ್ಡ್ ಡಾಲ್ ಹೌಸಿ ಬಿ) ಲಾರ್ಡ್ ಕರ್ಜನ್ ಸಿ) ಲಾರ್ಡ್ ವೆಲ್ಲಸ್ಲಿ ಡಿ) ಕಾರ್ನ್ ವಾಲೀಸ್

2. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ದೇಶೀಯ ಅರಸ.

   ಎ) ಹೈದರಾಬಾದ್ ನಿಜಾಮ ಬಿ) ಪೂನಾದ ಪೇಶ್ವೆ ಸಿ) ಮೈಸೂರು ಒಡೆಯರು ಡಿ) ಬಂಗಾಳದ ನವಾಬ

3. ಮೊದಲನೆಯ ಮಹಾಯುದ್ಧಕ್ಕೆ ತತ್ ಕ್ಷಣದ ಕಾರಣ.

   ಎ)ಪರ್ಲ್ ಹಾರ್ಬರ್ ದಾಳಿ ಬಿ) ಶಸ್ತ್ರಾಸ್ತ್ರ ಪೈಪೋಟಿ ಸಿ) ಆಸ್ಟ್ರಿಯಾ ರಾಜಕುಮಾರನ ಹತ್ಯೆ. ಡಿ) ಮೈತ್ರಿಕೂಟಗಳು

4. ಮೊದಲನೆಯ ಮಹಾಯುದ್ಧದಲ್ಲಿ ಕದನ ಬಾಂಧವ್ಯ ತ್ರಯರ ಗುಂಪಿನಲ್ಲಿರದ ದೇಶ.

   ಎ) ಜರ್ಮನಿ ಬಿ) ಬ್ರಿಟನ್ ಸಿ) ಫ್ರಾನ್ಸ ಡಿ) ರಷ್ಯಾ

5. ವಿಶ್ವ ಸಂಸ್ಥೆಯ ಸಚಿವ ಸಂಪುಟ(ಕ್ಯಾಬಿನೆಟ್) ಮಾದರಿಯಲ್ಲಿರುವ ಅಂಗ ಸಂಸ್ಥೆ.

   ಎ) ಸಚಿವಾಲಯ ಬಿ) ಸಾಮಾನ್ಯ ಸಭೆ ಸಿ)ಸಾಮಾಜಿಕ ಸಮಿತಿ ಡಿ) ಭದ್ರತಾ ಸಮಿತಿ.

6. ಅಂತರಾಷ್ಟ್ರೀಯ ನ್ಯಾಯಾಲಯ ಇರುವ ನಗರ.

   ಎ) ದಿ ಹೇಗ್ ಬಿ) ನ್ಯೂಯಾರ್ಕ್ ಸಿ) ವಾಷಿಂಗ್ಟನ್ ಡಿ) ಜಿನೆವಾ

7. ಶಿವರಾಮ್ ಕಾರಂತರು ಕೈಗಾ ವಿರೋಧಿ ಚಳುವಳಿ ನಡೆಸಲು ಕಾರಣ.

   ಎ) ಅರಣ್ಯನಾಶ ಬಿ) ಅಣುವಿಕಿರಣದಿಂದ ಜೀವ ಪ್ರಭೇಧ ನಾಶ ಸಿ)ಪರಿಸರ ಮಾಲಿನ್ಯ ಡಿ) ಎಲ್ಲವೂ

8. ಇದು ಸಸ್ಯಾವಶೇಷ ಇಂಧನವಾಗಿದೆ.

   ಎ) ಪೆಟ್ರೋಲಿಯಂ ಬಿ) ಅಣುವಿದ್ಯುತ್ ಸಿ) ಕಲ್ಲಿದಲು ಡಿ) ಜಲವಿದ್ಯುತ್

9. ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆ ಈ ರಾಜ್ಯದಲ್ಲಿದೆ.

   ಎ) ಒಡಿಶಾ ಬಿ) ಕರ್ನಾಟಕ ಸಿ) ತಮಿಳುನಾಡು ಡಿ) ಮಹಾರಾಷ್ಟ್ರ

10. ಮುಂಬೈ ನಗರವನ್ನು 'ಭಾರತದ ಮ್ಯಾಂಚೆಸ್ಟರ್' ಅಥವಾ 'ಭಾರತದ ಕಾಟನೋಪೋಲಿಸ್' ಎನ್ನಲು ಕಾರಣ.

    ಎ) ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರ. ಬಿ) ಸಾಫ್ಟ್ ವೇರ್ ಅಭಿವೃದ್ಧಿ ಸಿ)ದೊಡ್ಡ ನಗರ ಡಿ) ವಾಣಿಜ್ಯ ನಗರ

**ಆ. ಈ ಕೆಳಗಿನ ಪ್ರಶನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **1X12=12**

11. ಸಹಾಯಕ ಸೈನ್ಯ ಪದ್ಧತಿ ಎಂದರೇನು?
12. ವೆಲ್ಲಸ್ಲಿ ಸಹಾಯಕ ಸೈನ್ಯ ಪದ್ಧತಿ ಜಾರಿಗೆ ತಂದ ಉದ್ದೇಶವೇನು?
13. ವರ್ಣಭೇಧ ನೀತಿ ಜಗತ್ತಿನ ಎಲ್ಲಿಯೂ ಅನುಸರಿಸಬಾರದು ಎಂದು ಭಾರತ ಹೇಳಿದೆ ಏಕೆ?
14. ಸಾಮಾಜಿಕ ಚಳುವಳಿ ಎಂದರೇನು?
15. ವ್ಯವಸಾಯ ಮತ್ತು ಕೃಷಿ ಎಂದರೇನು?

16. ಜೀವನಾಧಾರಿತ ಬೇಸಾಯ ಎಂದರೇನು?

17. ಕೈಗಾರಿಕಾ ಪ್ರದೇಶ ಎಂದರೇನು?

18. ಅತಿ ಹೆಚ್ಚು ಜನಸಂಖ್ಯೆಯ ಕೇಂದ್ರಾಡಳಿತ ಪ್ರದೇಶ ಯಾವುದು?

19. ಅತಿ ಕಡಿಮೆ ಜನಸಾಂದ್ರತೆಯ ಭಾರತದ ರಾಜ್ಯ ಯಾವುದು?

20. 'ಹಣ' ಎಂದರೇನು?

21. 'ವಿಶ್ವ ವ್ಯಾಪಾರ ಸಂಘಟನೆ(WTO)ಯ ಸದಸ್ಯ ರಾಷ್ಟ್ರಗಳ ಸಂಖ್ಯೆ ಎಷ್ಟು?

22. ಜಾಗತೀಕರಣದಿಂದ ನಿರುದ್ಯೋಗ ಸಮಸ್ಯೆ ಹೇಗೆ ಹೆಚ್ಚಾಗುತ್ತದೆ?

**ಇ. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ. 2X6=12**

23. ಭಾರತಕ್ಕೆ ಯುರೋಪಿಯನ್ನರು ಜಲಮಾರ್ಗ ಕಂಡುಹಿಡಿಯಲು ಕಾರಣವಾದ ಅಂಶಗಳು ಯಾವುವು?

24. 1857 ರ ಸಿಪಾಯಿ ದಂಗೆಗೆ ತತ್ ಕ್ಷಣದ ಕಾರಣವೇನು?

25. ಸ್ವಾತಂತ್ರ್ಯಾ ನಂತರ ನಿರಾಶ್ರಿತರ ಸಮಸ್ಯೆಯನ್ನು ದೇಶ ಹೇಗೆ ಬಗೆಹರಿಸಿತು?

26. ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಜಾಗತಿಕ ಸಮಸ್ಯೆಗಳಾವುವು?

27. ಭಾರತದ ಯಾವುದಾದರೂ ನಾಲ್ಕು ಸಾಮಾಜಿಕ ಸಮಸ್ಯೆಗಳನ್ನು ಪಟ್ಟಿ ಮಾಡಿ.

28. ಉತ್ತರದ ಪರ್ವತಗಳ ಪ್ರಾಮುಖ್ಯತೆ ಬರೆಯಿರಿ.

**ಈ. ಈ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ. 3X3=9**

29. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಚರ್ಚಿಸಿ.

30. ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಗಳ ನಡುವಿನ ವ್ಯತ್ಯಾಸ ಬರೆಯಿರಿ.

31. ಭಾರತದ ಹಣ ಪೂರೈಕೆಯ ನಾಲ್ಕು ಪರಿಕಲ್ಪನೆಗಳನ್ನು ಬರೆಯಿರಿ.

**ಉ. ಈ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4X2=8**

32. ಕಾನೂನುಭಂಗ ಚಳುವಳಿ ಅಥವಾ ಉಪ್ಪಿನ ಸತ್ಯಾಗ್ರಹ ಕುರಿತು ವಿವರಿಸಿ.

33. ಜವಾಹರ್ ಲಾಲ್ ನೆಹರೂರವರ ಸಾಧನೆಗಳನ್ನು ವಿವರಿಸಿ.

**34. ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. 1+3=4**

ಎ) ಮುಂಬಯಿ ಬಂದರು ಬಿ)ಬೊಕಾರೋ ಸಿ)ಕೋರಮಂಡಲ ತೀರ ಡಿ)ಜಾರುಕಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ

**35. ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. 1+3=4**

ಎ) ಮನ್ನಾರ್ ಖಾರಿ ಬಿ) ಲಕಿಂಪುರ ಸಿ) ಸರ್ದಾರ್ ಪಟೇಲ್ ವಿಮಾನ ನಿಲ್ದಾಣ ಡಿ) ಕಪ್ಪು ಮಣ್ಣಿನ ಪ್ರದೇಶ

## ಅಭ್ಯಾಸ ಪ್ರಶ್ನೆ ಪತ್ರಿಕೆ – 4 (ಜನವರಿ 28 ರಿಂದ ಫೆಬ್ರವರಿ 3)

**ಅ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರ ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರ ಬರೆಯಿರಿ.** **1X10=10**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಾವೇಶದ ಮೊದಲ ಅಧ್ಯಕ್ಷರು.

   ಎ) ಎ.ಓ.ಹ್ಯೂಮ್.  ಬಿ) ಡಬ್ಲ್ಯು.ಸಿ. ಬ್ಯಾನರ್ಜಿ  ಸಿ) ದಾದಾಬಾಯಿ ನವರೋಜಿ  ಡಿ) ಬಿ.ಜಿ.ತಿಲಕ

2. ಜರ್ಮನಿಯಲ್ಲಿ ನಾಜಿವಾದ ಜಾರಿಗೆ ತಂದು ಎರಡನೇ ಮಹಾಯುದ್ಧಕ್ಕೆ ಕಾರಣನಾದ ನಾಯಕ.

   ಎ) ಮುಸೋಲಿನಿ  ಬಿ) ರೂಸ್ ವೆಲ್ಟ್  ಸಿ) ಹಿಟ್ಲರ್  ಡಿ) ಲೆನಿನ್

3. ಪ್ಯಾಸಿಸ್ಟ್ ಸರ್ವಾದಿಕಾರಿಯಾಗಿದ್ದವನು.

   ಎ) ಬೆನಿಟೋ ಮುಸೋಲಿನಿ  ಬಿ) ಹಿಟ್ಲರ್  ಸಿ) ಸ್ಟಾಲಿನ್  ಡಿ) ಚರ್ಚಿಲ್

4. 'ಸಾರ್ಕ್' ನ ಪ್ರಗತಿಯ ಹಿನ್ನಡೆಗೆ ಕಾರಣವಾಗಿರು ಅಂಶ.

   ಎ) ಆರ್ಥಿಕ ಸಮಸ್ಯೆ  ಬಿ) ಯುದ್ಧಗಳು  ಸಿ) ಗಡಿ ಸಮಸ್ಯೆಗಳು  ಡಿ) ಸದಸ್ಯ ರಾಷ್ಟ್ರಗಳ ಪರಸ್ಪರ ಅಪನಂಬಿಕೆ.

5. 'ಆಸಿಯಾನ್' ನ ಸದಸ್ಯ ರಾಷ್ಟದವಲ್ಲದ ದೇಶ.

   ಎ) ಸಿಂಗಪೂರ  ಬಿ) ಮಲೇಷಿಯಾ  ಸಿ) ಭಾರತ  ಡಿ) ಥೈಲ್ಯಾಂಡ್

6. ಕರ್ನಾಟಕದಲ್ಲಿ 1983 ರಲ್ಲಿ 'ಅಪ್ಪಿಕೋ ಚಳುವಳಿ' ನಡೆಸಿದ ಸ್ಥಳ.

   ಎ) ತೆಹ್ರಿ ಘರ್ವಾಲ್  ಬಿ) ಮಂಗಳೂರು  ಸಿ) ಉತ್ತರ ಕನ್ನಡ ಜಿಲ್ಲೆ ಸಲ್ಯಾನಿ ಗ್ರಾಮ  ಡಿ) ನರ್ಮದಾ

7. ಶಿವನ ಸಮುದ್ರ ಜಲವಿದ್ಯುತ್ ಕೇಂದ್ರ ಈ ರಾಜ್ಯದಲ್ಲಿದೆ.

   ಎ) ಕೇರಳಾ  ಬಿ) ಆಂದ್ರಪ್ರದೇಶ  ಸಿ) ಉತ್ತರ ಪ್ರದೇಶ  ಡಿ) ಕರ್ನಾಟಕ

8. ಈ ಕಳಗಿನವುಗಳಲ್ಲಿ ಯಾವುದು ಅರಣ್ಯಾಧಾರಿತ ಕೈಗಾರಿಕೆಯಾಗಿದೆ.

   ಎ) ಸಕ್ಕರೆ ಕೈಗಾರಿಕೆ  ಬಿ) ಕಾಗದ ಕೈಗಾರಿಕೆ  ಸಿ) ಅಲ್ಯುಮಿನಿಯಂ ಕೈಗಾರಿಕೆ  ಡಿ) ಜವಳಿ ಕೈಗಾರಿಕೆ

9. ಜಾಗತೀಕರಣ ಮುಕ್ತ ವ್ಯಾಪಾರ ವಲಯ ಸೃಷ್ಟಿಸುವುದು.

   ಎ) ಕಂಟೇನರ್ ಸೌಲಭ್ಯದ ಮೂಲಕ  ಬಿ) ಸಹಾಯ ಧನದ ಮೂಲಕ

   ಸಿ) ಆಮದು ರಫ್ತು ಸುಂಕ ನಿರ್ಮೂಲನೆ ಮೂಲಕ  ಡಿ) ಒಪ್ಪಂದಗಳ ಮೂಲಕ

10. ವಿಶ್ವದ ವ್ಯಾಪಾರ ಮತ್ತು ವ್ಯವಹಾರದ ಮೇಲ್ವಿಚಾರಣೆ ಮಾಡುವ ಸಂಸ್ಥೆ.

    ಎ) WTO  ಬಿ) WHO  ಸಿ) IMF  ಡಿ) UNESCO

**ಆ ಈ ಕೆಳಗಿನ ಪ್ರಶನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **1X12=12**

11. ಮೊದಲನೇ ಆಂಗ್ಲೋ ಸಿಖ್ ಯುದ್ಧಕ್ಕೆ ಕಾರಣವೇನು?
12. ಮೂರನೇ ಆಂಗ್ಲೋ ಮರಾಠಾ ಯುದ್ಧಕ್ಕೆ ಕಾರಣವೇನು?
13. ವಿಶ್ವದ ಯಾವುದೇ ಬಣಕ್ಕೆ ಸೇರದೇ ಇರುವ ನೀತಿಯನ್ನು ಏನೆನ್ನುವರು?
14. ದೇವರೇ ಸತ್ಯವೆಂದು ನಂಬಿ ನಂತರ ಸತ್ಯವೇ ದೇವರು ಎಂದು ನಂಬಿದವರು ಯಾರು?

15. ವರ್ಗಾವಣೆ ಬೇಸಾಯ ಮತ್ತು ಸ್ಥಿರ ಬೇಸಾಯಕ್ಕೆ ವ್ಯತ್ಯಾಸವೇನು?

16. ಮಿಶ್ರ ಬೇಸಾಯ ಎಂದರೇನು?

17. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಮೂಲ ಕೈಗಾರಿಕೆಯಾಗಿದೆ ಏಕೆ?

18. ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪನಿ(TISCO) ಎಲ್ಲಿದೆ?

19. ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ಭಾರತದ ರಾಜ್ಯ ಯಾವುದು?

20. 'ಸಾಟಿ ವಿನಿಮಯ ಪದ್ಧತಿ' ಎಂದರೇನು?

21. ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಗಳು ಯಾವ ರೂಪದ ಹಣವಾಗಿವೆ?

22. ಜಾಗತೀಕರಣ ಯಾವ ಸಂಸ್ಥೆಗಳ ಪಾತ್ರ ಹೆಚ್ಚಿಸಿದೆ?

**ಇ. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2X6=12**

23. ಎರಡನೇ ಕರ್ನಾಟಿಕ್ ಯುದ್ಧದ ಘಟನೆಗಳನ್ನು ಬರೆಯಿರಿ?

24. 1857 ರ ಸಿಪಾಯಿ ದಂಗೆಯ ವಿಫಲತೆಗೆ ಕಾರಣಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

25. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ವಿಮುಕ್ತಿಗೊಳಿಸಲಾಯಿತು?

26. ಮಾನವ ಹಕ್ಕುಗಳ ಪ್ರತಿಪಾದನೆಗೆ ಭಾರತ ಕೈಗೊಂಡಿರುವ ಕ್ರಮಗಳನ್ನು ಬರೆಯಿರಿ?

27. ಮಕ್ಕಳ ಕಳ್ಳಸಾಗಾಣಿಕೆ ತಡೆಗೆ ಎರಡು ಕ್ರಮಗಳನ್ನು ಸೂಚಿಸಿ.

28. ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು?

**ಈ. ಈ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ.** **3X2=6**

29. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸ ಬರೆಯಿರಿ.

30. ಭಾರತದ ಬ್ಯಾಂಕ್ ಗಳ ವಿಧಗಳನ್ನು ಬರೆಯಿರಿ.

**ಉ. ಈ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **4X2=8**

31. ಡಾ॥ ಬಿ.ಆರ್ ಅಂಬೇಡ್ಕರ್ ರವರ ಸಾಧನೆಗಳನ್ನು ವಿವರಿಸಿ.

32. ಸುಭಾಷ್ ಚಂದ್ರ ಬೋಸ್ ರವರ ಸಾಧನೆಗಳನ್ನು ವಿವರಿಸಿ.

33. **ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ.** **1+3=4**

ಎ) ಬಾಬೆ ಹೈ ಬಿ) ಅಣ್ಣಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸಿ) ರಾನಿಗಂಜ್ ಡಿ) ವಾರಣಾಸಿ

34. **ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ.** **1+3=4**

ಎ) ಪಾಕ್ ಜಲಸಂಧಿ ಬಿ) ಅಂಕಲೇಶ್ವರ ಸಿ) ಬೆಂಗಳೂರು ಡಿ) ಚೆನ್ನೈ ಬಂದರು

## ಅಭ್ಯಾಸ ಪ್ರಶ್ನೆ ಪತ್ರಿಕೆ – 5 (ಫೆಬ್ರವರಿ 4 ರಿಂದ 10)

**ಅ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರ ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರ ಬರೆಯಿರಿ.** **1X10=10**

1. ಸಂಪತ್ತಿನ ಸೋರುವಿಕೆ ಸಿದ್ಧಾಂತ ಮಾಡಿದವರು.

   ಎ) ಗೋಖಲೆ ಬಿ) ಡಬ್ಲು.ಸಿ. ಬ್ಯಾನರ್ಜಿ ಸಿ) ದಾದಾಬಾಯಿ ನವರೋಜಿ ಡಿ) ಬಿ.ಜಿ. ತಿಲಕ

2. ಮೊದಲನೇ ಆಂಗ್ಲೋ ಸಿಖ್ ಯುದ್ಧ ಒಪ್ಪಂದದೊಂದಿಗೆ ಕೊನೆಗೊಂಡಿತು.

   ಎ) ಸಾಲ್ಬಾಯ್ ಒಪ್ಪಂದ ಬಿ) ಲಾಹೋರ್ ಒಪ್ಪಂದ ಸಿ) ಮದ್ರಾಸ್ ಒಪ್ಪಂದ ಡಿ) ಪುರಂದರ ಒಪ್ಪಂದ

3. ರಷ್ಯಾ ನೇತೃತ್ವದ ಕಮ್ಯುನಿಷ್ಟ್ ರಾಷ್ಟ್ರಗಳು ಮಾಡಿಕೊಂಡ ಮೈತ್ರೀಕೂಟ.

   ಎ) ವಾರ್ಸಾ ಬಿ) ನ್ಯಾಟೋ ಸಿ) ಸೆಂಟೋ ಡಿ) ಸೀಟೋ

4. ದ್ವಿತೀಯ ಮಹಾಯುದ್ಧದ ಬಳಿಕ ಆರ್ಥಿಕ ಪುನಶ್ಚೇತನಕ್ಕಾಗಿ ಸ್ಥಾಪನೆಯಾದ ಸಂಸ್ಥೆ.

   ಎ) ಐ.ಎಮ್.ಎಫ್ ಬಿ) ಡಬ್ಲು.ಹೆಚ್.ಒ. ಸಿ) ವಿಶ್ವ ಬ್ಯಾಂಕ್(IBRD) ಡಿ) ಆಹಾರ ಮತ್ತು ಕೃಷಿ ಸಂಸ್ಥೆ

5. IMF ಮತ್ತು IBRD ಜೊತೆಗೆ ತೃತೀಯ ಆರ್ಥಿಕ ಆಧಾರ ಸ್ಥಂಭ.

   ಎ) ವಿಶ್ವ ವ್ಯಾಪಾರ ಸಂಘ(WTO) ಬಿ) ಡಬ್ಲು.ಹೆಚ್.ಒ. ಸಿ) ವಿಶ್ವ ಬ್ಯಾಂಕ್ ಡಿ) ಯುನಿಸೆಫ್

6. ಮೌನ ಕಣಿವೆ ಆಂದೋಲನ ನಡೆದ ರಾಜ್ಯ.

   ಎ) ಕರ್ನಾಟಕ ಬಿ) ರಾಜಸ್ಥಾನ ಸಿ) ಉತ್ತರ ಪ್ರದೇಶ ಡಿ) ಕೇರಳ.

7. ಧಾರವಾಡ ಜಿಲ್ಲೆಯ ನರಗುಂದದಲ್ಲಿ ರೈತ ಬಂಡಾಯ ನಡೆದ ವರ್ಷ.

   ಎ) 1980 ಬಿ) 1854 ಸಿ) 1857 ಡಿ) 1885

8. ಭಾರತದಲ್ಲಿ ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ ಹೆಚ್ಚಿದೆ ಕಾರಣ.

   ಎ) ದೇಶದ ವಿದ್ಯುತ್ ಅಭಾವ ನೀಗಿಸಬಹುದು ಬಿ) ಸುಲಭವಾಗಿ ನಗರ ಗ್ರಾಮಗಳಿಗೆ ಸರಬರಾಜು

   ಸಿ) ಮೇಲಿನ ಎರಡೂ ಹೌದು. ಡಿ) ಮೇಲಿನ ಎರಡೂ ಅಲ್ಲ

9. ಬೆಂಗಳೂರನ್ನು ಭಾರತದ 'ಸಿಲಿಕಾನ್ ವ್ಯಾಲಿ' ಎನ್ನಲು ಕಾರಣ.

   ಎ) ಜವಳಿ ಉತ್ಪಾದನೆ ಬಿ) ಸಾಫ್ಟ್ ವೇರ್ ಕೈಗಾರಿಕೆಗಳು ಸಿ) ಸಿಲಿಕಾನ್ ಉತ್ಪಾದನೆ ಡಿ) ಉದ್ಯಾನಗಳು

10. ಶೀಘ್ರ ಆಹಾರ ಸರಪಳಿ ಇದರ ಪರಿಣಾಮವಾಗಿದೆ.

   ಎ) ಪರಿಸರ ಮಾಲಿನ್ಯ ಬಿ) ಆಮದು ಹೆಚ್ಚಳ ಸಿ) ಜಾಗತೀಕರಣ ಡಿ) ಕೃಷಿ ಬಿಕ್ಕಟ್ಟು

**ಆ ಈ ಕೆಳಗಿನ ಪ್ರಶನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **1X12=12**

11. 2 ನೇ ಆಂಗ್ಲೋ ಮರಾಠಾ ಯುದ್ಧಕ್ಕೆ ಕಾರಣವೇನು?
12. 'ವಿದೇಶಾಂಗ ನೀತಿ' ಎಂದರೇನು?
13. 'ನಿಶ್ಯಸ್ತ್ರೀಕರಣ' ಎಂದರೇನು?
14. 'ಜನಮಂದೆ' ಎಂದರೇನು?

15. ಮುಂಗಾರು ಮತ್ತು ಹಿಂಗಾರು ನಡುವಣ ಬೆಳೆ ಋತು ಯಾವುದು?

16. ಭಾರತದಲ್ಲಿ ಅತಿ ಹೆಚ್ಚು ಭತ್ತ ಉತ್ಪಾದಿಸುವ ರಾಜ್ಯ ಯಾವುದು?

17. ಭಾರತದಲ್ಲಿ ಪ್ರಾಚೀನ ಕಾಲದಲ್ಲಿ ಹತ್ತಿ ಬಟ್ಟೆ ಉತ್ಪಾದನೆ ಹೇಗೆ ನಡೆಯುತ್ತಿತ್ತು?

18. ಇಸ್ಪಾತ್ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಎಲ್ಲಿದೆ?

19. ಜನಸಂಖ್ಯೆ ಎಂದರೇನು?

20. ಭಾರತದಲ್ಲಿರುವ ಸಾರ್ವಜನಿಕ ವಲಯದ ಬ್ಯಾಂಕಗಳು ಎಷ್ಟು?

21. ಬ್ಯಾಂಕ್ ಗಳ ಬ್ಯಾಂಕ್ ಯಾವುದು?

22. ಜಾಗತೀಕರಣದಿಂದ ನೀತಿಬಾಹೀರ ವ್ಯವಹಾರ ಪದ್ಧತಿ ರೂಢಿಗೆ ಬರುವ ಸಾಧ್ಯತೆ ಇದೆ ಏಕೆ?

**ಇ. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2X6=12**

23. ಪ್ಲಾಸಿ ಕದನಕ್ಕೆ ಕಾರಣವಾದ ಅಂಶಗಳು ಯಾವುವು?

24. 1857 ರ ದಂಗೆಯ ನಾಲ್ಕು ಪರಿಣಾಮಗಳನ್ನು ಬರೆಯಿರಿ.

25. ಭಾರತ ಮತ್ತು ಪಾಕಿಸ್ಥಾನ ಸಂಭಂದ ಸೌಹಾರ್ಧಯುತವಾಗಿಲ್ಲ. ಕಾರಣವೇನು?

26. ಶಸ್ತ್ರಾಸ್ತ್ರ ಪೈಪೋಟಿ ಜಗತ್ತಿನ ವಿನಾಶಕ್ಕೆ ನಾಂದಿ ಹೇಗೆ?

27. ಭಾರತದ ನಾಲ್ಕು ಮೇಲ್ಮೈ ಲಕ್ಷಣಗಳನ್ನು ಬರೆಯಿರಿ.

28. ಮೂರು ಹಂತದ ಗ್ರಾಹಕ ನ್ಯಾಯಾಲಯಗಳನ್ನು ತಿಳಿಸಿರಿ.

**ಈ. ಈ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ.** **3X2=6**

29. ಅಸ್ಪೃಶ್ಯರ ಸಮಸ್ಯೆಗಲನ್ನು ಬರೆಯಿರಿ.

30. ಭಾರತೀಯ ರಿಸರ್ವ ಬ್ಯಾಂಕ್(RBI) ನ ಕಾರ್ಯಗಳನ್ನು ಬರೆಯಿರಿ..

**ಉ. ಈ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **4X2=8**

31. ಮಂದಗಾಮಿಗಳ ಸಾಧನೆಗಳನ್ನು ವಿವರಿಸಿ.

32. ತೀರ್ವವಾದಿಗಳ (ಬಾಲಗಂಗಾಧರ ತಿಲಕರ) ಸಾಧನೆಗಳನ್ನು ವಿವರಿಸಿ.

33. **ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ.** **1+3=4**

ಎ) ಗುವಾಹಾಟಿ ಬಿ) ಇಂದಿರಾ ಪಾಯಿಂಟ್ ಸಿ) ಸಿಂಗರೇಣಿ ಡಿ) ಮೆಕ್ಕಲು ಮಣ್ಣಿನ ಪ್ರದೇಶ

34. **ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ.** **1+3=4**

ಎ) ತುತಕುಡಿ ಬಂದರು ಬಿ) ಇಂದಿರಾಕೋಲ್ ಸಿ) ಸಿಂಗ್ರೌಲಿ ಡಿ) ಅಮೃತಸರ

## ಅಭ್ಯಾಸ ಪ್ರಶ್ನೆ ಪತ್ರಿಕೆ – 6 (ಫೆಬ್ರವರಿ 18 ರಿಂದ 24)

**ಅ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರ ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರ ಬರೆಯಿರಿ.** **1X10=10**

1. 'ರಾಜಕೀಯ ಬಿಕ್ಷುಕರು' ಎಂದು ಕರೆಯಲ್ಪಟ್ಟವರು.

   ಎ) ಮಂದಗಾಮಿಗಳು ಬಿ) ತೀವ್ರವಾದಿಗಳು ಸಿ) ಕ್ರಾಂತಿಕಾರಿಗಳು ಡಿ) ಬುಡಕಟ್ಟು ವರ್ಗಗಳು

2. ಝಾನ್ಸಿ ಈ ಕೆಳಗಿನ ಯಾವ ನೀತಿಯಡಿ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು.

   ಎ) ದತ್ತು ಮಕ್ಕಳಿಗರ ಹಕ್ಕಿಲ್ಲ ನೀತಿ. ಬಿ) ಸಹಾಯಕ ಸೈನ್ಯ ಪದ್ಧತಿ ಸಿ) ಒಡೆದು ಆಳುವ ನೀತಿ ಡಿ) ಯುದ್ಧ ನೀತಿ

3. ಚೀನಾದಲ್ಲಿ ಕಮ್ಯುನಿಷ್ಟರ 'ಧೀರ್ಘ ಪಯಣ' ಇವರ ನೇತೃತ್ವದಲ್ಲಿ ನಡೆಯಿತು.

   ಎ) ಚಿಯಾಂಗ್ ಕೈಷೇಕ್ ಬಿ) ಲೆನಿನ್ ಸಿ) ಜೋಸೆಫ್ ಸ್ಟಾಲಿನ್ ಡಿ) ಮಾವೋತ್ಸೆ ತುಂಗ

4. ಜಗತ್ತಿನಾದ್ಯಂತ ಬಡತನ ಹಸಿವು ಮತ್ತು ಅಪೌಷ್ಟಿಕತೆ ವಿರುದ್ಧ ಹೋರಾಡುವ ಸಂಸ್ಥೆ.

   ಎ) ವಿಶ್ವ ಬ್ಯಾಂಕ್ ಬಿ) ಐ.ಎಮ್.ಎಫ್ ಸಿ) ಆಹಾರ ಮತ್ತು ಕೃಷಿ ಸಂಸ್ಥೆ (FAO) ಡಿ) ಡಬ್ಲ್ಯು.ಟಿ.ಒ.

5. ದತ್ತಿ ಸಮಿತಿ ಇಂದು ನಿಷ್ಕ್ರಿಯವಾಗಿದೆ. ಕಾರಣ.

   ಎ)ಯಾವುದೇ ಸದಸ್ಯ ರಾಷ್ಟ್ರಗಳಿಲ್ಲ ಬಿ)ಯಾವುದೇ ದತ್ತಿ ಉಳಿದಿಲ್ಲ ಸಿ)ಸದಸ್ಯರ ನಿಷ್ಕ್ರಿಯತೆ ಡಿ)ಹಣಕಾಸಿನ ಕೊರತೆ

6. 1864 ರಲ್ಲಿ ವಿಶ್ವದ ಮೊದಲ ಕಾರ್ಮಿಕರ ಸಂಘಟನೆ ಸ್ಥಾಪನೆಯಾದ ಸ್ಥಳ.

   ಎ) ಲಂಡನ್ ಬಿ) ಬರ್ಲಿನ್ ಸಿ) ನ್ಯೂಯಾರ್ಕ್ ಡಿ) ಮುಂಬಯಿ

7. ಕುಸುಮ ಸೊರಬ ಈ ಚಳುವಳಿಯಲ್ಲಿ ತಮ್ಮ ಜೀವ ಕಳೆದುಕೊಂಡರು.

   ಎ)ಪರಿಸರ ಚಳುವಳಿ ಬಿ)ಕೈಗಾ ವಿರೋದಿ ಚಳುವಳಿ ಸಿ)ಕಾರ್ಮಿಕ ಚಳುವಳಿ ಡಿ)ಮದ್ಯಪಾನ ನಿಷೇಧ ಚಳುವಳಿ.

8. 'ಕಲ್ಪಕಂ' ಮತ್ತು 'ಕುಂದನಕುಲಂ' ಪರಮಾಣು ವಿದ್ಯುತ್ ಕೇಂದ್ರಗಳಿರುವ ರಾಜ್ಯ.

   ಎ) ಕೇರಳ ಬಿ) ತೆಲಂಗಾಣ ಸಿ) ಒಡಿಶಾ ಡಿ) ತಮಿಳುನಾಡು

9. ಮಾನವನ ಬುದ್ಧಿವಂತಿಕೆ ಸಾಮರ್ಥ್ಯ ಅವಲಂಬಿಸಿರುವ ಕೈಗಾರಿಕೆ.

   ಎ) ಕಾಗದ ಕೈಗಾರಿಕೆ ಬಿ) ಜ್ಞಾನಾಧಾರಿತ ಕೈಗಾರಿಕೆ ಸಿ) ಉಕ್ಕಿನ ಕೈಗಾರಿಕೆ ಡಿ) ಅಲ್ಯುಮಿನಿಯಂ ಕೈಗಾರಿಕೆ

10. ವಿಶ್ವ ವ್ಯಾಪಾರ ಸಂಘಟನೆ (WTO) ಸ್ಥಾಪನೆಯಾದ ವರ್ಷ.

    ಎ) 1945 ಅಕ್ಟೋಬರ 24 ಬಿ) 1995 ಅಕ್ಟೋಬರ್ 24 ಸಿ) 1885 ಜನವರಿ 1 ಡಿ) 1995 ಜನವರಿ 1.

**ಆ. ಈ ಕೆಳಗಿನ ಪ್ರಶನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **1X12=12**

11. ಎರಡನೇ ಆಂಗ್ಲೋ ಸಿಖ್ ಯುದ್ಧದಲ್ಲಿ ಸಿಖ್ಖರ ಪ್ರತಿಬಟನೆಗಳ ನೇತೃತ್ವವನ್ನು ಯಾರು ವಹಿಸಿದ್ಧರು.
12. ಪಂಚಶೀಲ ತತ್ವಗಳನ್ನು 1954 ರಲ್ಲಿ ಯಾವ ರಾಷ್ಟ್ರದೊಂದಿಗಿನ ಒಪ್ಪಂದದ ಮೂಲಕ ಸೇರಿಸಲಾಯಿತು?
13. 'ದೊಂಬಿ' ಅಥವಾ 'ಗಲಭೆ' ಎಂದರೇನು
14. ಮದ್ಯಪಾನ ನಿಷೇಧ ಚಳುವಳಿ ವಿಭಿನ್ನವಾದದ್ದು ಏಕೆ?

15. ಭಾರತದಲ್ಲಿ ಅತಿ ಹೆಚ್ಚು ಗೋದಿ ಬೆಳೆಯುವ ರಾಜ್ಯ ಯಾವುದು?

16. 'ನೆಡುತೋಪು ಬೇಸಾಯ' ಎಂದರೇನು?

17. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಎಲ್ಲಿದೆ?

18. ಜನಸಾಂದ್ರತೆ ಎಂದರೇನು?

19. ಮೇಲ್ಮೈ ಲಕ್ಷಣಗಳು ಹೇಗೆ ಜನಸಂಖ್ಯೆಯನ್ನು ನಿಯಂತ್ರಿಸುತ್ತವೆ?

20. ಭಾರತದ ಕೇಂದ್ರ ಬ್ಯಾಂಕ್ ಯಾವುದು?

21. 'ಬ್ಯಾಂಕಿಂಗ್' ಎಂದರೇನು?

22. ಅಮೆರಿಕದ ಕರೆನ್ಸಿ (ಕಾಗದದ ಹಣ) ಯಾವುದು?

**ಇ. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ. 2X6=12**

23. ಬಕ್ಸಾರ್ ಕದನದ ಪರಿಣಾಮಗಳನ್ನು ಬರೆಯಿರಿ?

24. 1858 ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ 4 ಅಂಶಗಳನ್ನು ಬರೆಯಿರಿ.

25. ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಸಂಬಂಧ ಅನಿವಾರ್ಯ. ಏಕೆ?

26. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳು ಯಾವುವು?

27. ನೈರುತ್ಯ ಮಾನ್ಸೂನ್ ಮಾರುತಗಳ ಎರಡು ಶಾಖೆಗಳನ್ನು ಬರೆಯಿರಿ.

28. ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿರಬೇಕಾದ ಅಂಶಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

**ಈ. ಈ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ. 3X2=6**

29. ಬ್ಯಾಂಕ್ ನ ಕಾರ್ಯ/ಸೇವೆಗಳನ್ನು ಬರೆಯಿರಿ.

30. ಹಣದ ಕಾರ್ಯಗಳನ್ನು ಬರೆಯಿರಿ..

**ಉ. ಈ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4X2=8**

31. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಮತ್ತು ಕಾರ್ಮಿಕರ ಹೋರಾಟದ ಪಾತ್ರ ವಿವರಿಸಿ.

32. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳ ಹೋರಾಟದ ಪಾತ್ರ ವಿವರಿಸಿ.

33. **ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. 1+3=4**

ಎ) ಭಾಕ್ರಾ ನಂಗಲ್ ಬಿ) ಪೋರ್ಟ್ ಬ್ಲೇರ್ ಸಿ) ಮಂಗಳೂರು ಬಂದರು ಡಿ) ಮರಭೂಮಿ ಮಣ್ಣಿನ ಪ್ರದೇಶ

34. **ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. 1+3=4**

ಎ) ವಿಶಾಖಪಟ್ಟಣ ಬಂದರು ಬಿ) ತುಂಗಭದ್ರಾ ಯೋಜನೆ ಸಿ) ತಿರುವನಂತಪುರಂ ಡಿ) ಪರ್ವತ ಮಣ್ಣಿನ ಪ್ರದೇಶ